# 8

# ಜಗತ್ತಿನಲ್ಲಿರುವ ಶ್ರೇಷ್ಟ ಸಂಗತಿ

## (1 ಕೊರಿಂಥ 13)

*ಪರಿವರ್ತಿತ ಜೀವಿತವು ಪ್ರೀತಿಯ ಜೀವಿತವಾಗಿದೆ ...*

ಇಲ್ಲೊಂದು ಒಂದು ಹಾಡಿಗೆ "ಜಗತ್ತಿಗೆ ಈಗ ಅವಶ್ಯವಿರುವದು ಪ್ರೀತಿ, ಮಧುರವಾದ ಪ್ರೀತಿ. ಅದೊಂದೇ ಸಂಗತಿ ಜಗತ್ತಿನಲ್ಲಿರುವ ಜಗತ್ತಿನಲ್ಲಿ ವಿರಳವಾಗಿ ಸಿಕ್ಕುವುದಾಗಿದೆ." ಇದನ್ನು ನಾವು ಒಪ್ಪುವವರಾಗಿದ್ದೇವೆ. ಅನೇಕ ಬೆಟ್ಟಗಳೂ ಇವೆ, ಮತ್ತು ಕೊಳ್ಳಗಳೂ ಹಾಗೂ ಹೊಲಗಳೂ ಇವೆ; ಹೆಚ್ಚಾದ ಮನೆಗಳೂ ಮತ್ತು ಕಾರುಗಳೂ ಮತ್ತು ಫ್ರೀವೇಗಳೂ ಮತ್ತು ಶಾಪಿಂಗ್ ಮಾಲ್‌ಗಳೂ ಇವೆ; ಅನೇಕ ಗ್ರಹಬಳಿಕೆಯ ವಸ್ತುಗಳಾದ - ಫ್ರಿಜ್, ವಾಶಿಂಗ್ ಮಶಿನ್ ಮತ್ತು ಪಾತ್ರೆತೊಳೆಯುವ ಮಶಿನ್ ಇವು ಅಲ್ಲಿವೆ; ಬಲುವಾದ ಅಪರಾಧಗಳೂ ಮತ್ತು ಸುಳ್ಳುಹೇಳುವದು ಮತ್ತು ಕಳುವುಮಾಡುವದು ಮತ್ತು ಧರ್ಮನಿಂದನೆ ಅಲ್ಲಿವೆ. ಆದರೆ ಅಲ್ಲಿ ಇವೆಲ್ಲ ಸಂಗತಿಗಳೊಡನೆ ಪ್ರೀತಿಯು ಅತ್ಯಲ್ಪವಾಗಿ ಇದೆ! ಕ್ರೈಸ್ತನೊಬ್ಬನಿಗೆ ಅಲ್ಲಿ ಎಂದಿಗೂ ಸಾಕಷ್ಟು ಪ್ರೀತಿಯು ಸಿಕ್ಕುವುದಿಲ್ಲ. ಯಾಕೆಂದರೆ ಪ್ರೀತಿಯು ಜಗತ್ತಿನಲ್ಲಿರುವ ಶ್ರೇಷ್ಟ ಸಂಗತಿಯಾಗಿದೆ! ಅದೇ ಸಂಗತಿಯನ್ನು ಪೌಲನು ಪ್ರೀತಿಯ ಮೇಲಣ ಶ್ರೇಷ್ಟತೆಯನ್ನು 1 ಕೊರಿಂಥ 13ನೇಯ ಅಧ್ಯಾಯದಲ್ಲಿ ತೋರಿಸುವವನಾಗಿದ್ದಾನೆ.

ಅಧ್ಯಾಯ 12ರಲ್ಲಿ, ಪೌಲನು ಪರಿಶುದ್ಧಾತ್ಮನ ಅದ್ಭುತ ವರಗಳ ಬಗೆಗೆ ಚರ್ಚಿಸಿದ್ದಾನೆ ಆತನ ಆ ಅಧ್ಯಾಯವನ್ನು ಸಮಾರೋಪಿಸುತ್ತಾ, "ನಾನು ನಿಮಗೆ ಇನ್ನೂ ಉತ್ಕೃಷ್ಟವಾದ ಮಾರ್ಗವನ್ನು ತೋರಿಸುತ್ತೇನೆ" ಎಂದು ಹೇಳುತ್ತಾನೆ. ಆ "ಉತ್ಕೃಷ್ಟವಾದ ಮಾರ್ಗವು" ಪ್ರೀತಿಯ ಮಾರ್ಗವೇ. ಅದು ಶ್ರೇಷ್ಟವಾದ ಹಾಗೆಯೇ ಅದ್ಭುತವಾದ ವರದಂತೆ ಇರುವದು ಆಗಿದ್ದು, ಪ್ರೀತಿಯು ಶ್ರೇಷ್ಟವಾಗಿದೆ! ವಾಸ್ತವವಾಗಿ ಪೌಲನು ಪ್ರೀತಿಯು ಕೇವಲ ಶ್ರೇಷ್ಟವಾದದ್ದಲ್ಲ, ಅದು ಅತೀ ಶ್ರೇಷ್ಟವಾಗಿರುವುದಕ್ಕೆ ಮೂರು ಕಾರಣಗಳು ಇವೆ ಎಂದು ಸೂಚಿಸಿದ್ದಾನೆ.

### ಪ್ರೀತಿಯು ಜಗತ್ತಿನಲ್ಲಿರುವ ಶ್ರೇಷ್ಟ ಸಂಗತಿಯಾಗಿದೆ ಯಾಕೆಂದರೆ ಇದಿಲ್ಲದ ಯಾವ ವಸ್ತುವೂ ಬೆಲೆಯಿಲ್ಲದವುಗಳು ಆಗಿವೆ (1 ಕೊರಿಂಥ 13:1-3)

ಈ ವಚನಗಳಲ್ಲಿ ಪೌಲನಿಂದ ವರ್ಣಿತವಾದ ಮನುಷ್ಯನನ್ನು ಚಿತ್ರಿಸಿರಿ. ನಿರರ್ಗಳವಾಗಿ ಮಾತಾಡುವ ಮನುಷ್ಯನು ಆತನಾಗಿದ್ದನು. ಆತನು ಆತ್ಮನ ಆದ್ಭುತೀಯ ವರವನ್ನು ಹೊಂದಿದ್ದನು. ಆತನಿಗೆ ಪ್ರವಾದಿಸುವ ವರವಿತ್ತು; ಆತನು ರಹಸ್ಯಗಳನ್ನು ಅರಿತಿದ್ದನು; ಆತನು ಅದ್ಭುತವಾದ ಜ್ಞಾನವನ್ನು ಹೊಂದಿದ್ದನು. ಆತನು ನಂಬಿಗಸ್ತ - ಶ್ರೇಷ್ಟ ನಂಬಿಕೆಯುಳ್ಳವನೂ - ಬೆಟ್ಟಗಳನ್ನು ತೆಗೆದಿಡುವುದಕ್ಕೆ ಬೇಕಾದಷ್ಟು ನಂಬಿಕೆಯುಳ್ಳ ಮನುಷ್ಯ ಆತನಾಗಿದ್ದನು. ಆತನು ಉದಾರವಾಗಿ ಕೊಡುವವನೂ ಆಗಿದ್ದನು; ಆತನು ತನಗಿರುವುದೆಲ್ಲವನೂ ಕೊಡುವವನು ಆಗಿದ್ದನು. ಅಂತಿಮವಾಗಿ ಆತನು, ಸ್ವತ್ಯಾಗವನ್ನು ಮಾಡುವವನೂ ಆಗಿದ್ದು ತನ್ನ ದೇಹವನ್ನು ಸುಡುವುದಕ್ಕೂ ಕೂಡಾ ಒಪ್ಪಿಸಿದವನೂ ಆಗಿದ್ದನು.

ಅಂಥ ಒಬ್ಬ ಮನುಷ್ಯನನ್ನು ಊಹಿಸಿಕೊಳ್ಳಿರಿ: ವಾಕ್ಚಾತುರ್ಯ, ವರಗಳು

ಜ್ಞಾನದಾಯಕನೂ ಆದ ಒಬ್ಬ ಮನುಷ್ಯನು; ಶ್ರೇಷ್ಟ ನಂಬಿಕೆಯನ್ನು ಹೊಂದಿದ ಒಬ್ಬ ಮನುಷ್ಯನು; ಎಲ್ಲವನ್ನೂ ಕೊಡಲ್ಪಟ್ಟ ಮತ್ತು ನಂತರ ತನ್ನನ್ನೇ ಕೊಟ್ಟ ಮನುಷ್ಯನು ಈತನು. ಎಂಥ ಶ್ರೇಷ್ಟ ಕ್ರೈಸ್ತನು! ಆದರೆ ಈ ಮನುಷ್ಯನ ಬಗೆಗೆ ಏನೂ ಒಂದು ವಿಶೇಷ ಇದೆ: ಆತನು ಇತರರನ್ನು ಪ್ರೀತಿಸನು! ಹೀಗಿದ್ದಾಗ ಪೌಲನು ಆತನ ಬಗೆಗೆ ಏನು ಹೇಳುತ್ತಾನೆ? ಆತನ ಬೋಧನೆ ಮತ್ತು ಕಲಿಸುವಿಕೆಗಳು ನಿರುಪಯುಕ್ತವಾದವುಗಳು: ಆತನು ಶಬ್ದಮಾಡುವ ಜಾಗಟೆ ಅಥವಾ ಗಣಗಣಿಸುವ ತಾಳದಂತೆಯೂ ಆಗಿರುತ್ತಾನೆ. ಆತನು ಏನನ್ನು ಇಡೇರಿಸಲಾರನು! ನಾವು ಅಂಥ ಮನುಷ್ಯನನ್ನು ನೋಡುತ್ತಾ, "ಈತನು ಏನಾದರು ಆಗಿದ್ದಾನೆಯೇ" ಎಂದು ಕೇಳುತ್ತಾನೆ, ದೇವರು ಆತನೆಡೆಗೆ ನೋಡಿ "ಆತನೇನು ಅಲ್ಲ" ಎಂದು ಹೇಳುತ್ತಾನೆ.

ಪ್ರೀತಿಯಿಲ್ಲದೇ ಏನೂ ಇಲ್ಲದ ನಿನಗೆ ಯಾವುದೇ ಬೆಲೆಯೂ ಇಲ್ಲ. ನೀನು ವಾಕ್ಚಾತುರ್ಯವುಳ್ಳವನೂ, ವರಗಳನ್ನು ಹೊಂದಿದವನೂ, ಜ್ಞಾನವಂತನೂ ಮತ್ತು ನಂಬಿಗಸ್ತನೂ ಆಗಿರಬಹುದು. ಆದರೆ ಪ್ರೀತಿಯಿಲ್ಲದಿದ್ದರೆ ಅದು ಏನನ್ನೂ ಸಾಧಿಸಲಾರದು, ಮತ್ತು ನೀನು ಏನೂ ಅಲ್ಲದವನಾಗಿರುತ್ತಿ. ನೀನು ದಯಾಳವೂ ಮತ್ತು ತ್ಯಾಗಿಯೂ ಆಗಿರಬಹುದು; ನೀನು ಎಲ್ಲವನ್ನೂ, ನಿನ್ನನ್ನು ಒಳಗೊಂಡ ಎಲ್ಲವನ್ನು ಕೊಟ್ಟಿರಬಹುದು. ಆದರೆ ಅದನ್ನು ನೀನು ತಪ್ಪಾದ ಉದ್ದೇಶದಿಂದ ಮತ್ತು ಪ್ರೀತಿಯಿಲ್ಲದೇ ಮಾಡಿದ್ದಾದರೆ, ಅದು ಲಾಭವಿಲ್ಲದ್ದಾಗಿದೆ. ಪ್ರೀತಿಯಿಲ್ಲದೇ ಹೋದರೆ ಎಲ್ಲವೂ ಅಮೌಲ್ಯವಾದದ್ದು ಆಗಿದೆ. ನೀನು ಅದ್ಭುತ ವರಗಳ ಬಗೆಗೆ ಒಂದರ ಅಥವಾ ಸಮೂಹದ ಬಗೆಗೆ ಏನನ್ನೂ ಹೇಳಲಾರಿ. ಅಥವಾ ಅದರ ಹೊರತಾಗಿ ಏನನ್ನೂ ಹೇಳಲಾರಿ. ಹೀಗೆ ಪ್ರೀತಿಯು ಜಗತ್ತಿನಲ್ಲಿ ಶ್ರೇಷ್ಟವಾದ ಸಂಗತಿಯಾಗಿದೆ!

## ಪ್ರೀತಿಯು ಜಗತ್ತಿನಲ್ಲಿ ಶ್ರೇಷ್ಟವಾದ ಸಂಗತಿಯಾಗಿದೆ ಯಾಕೆಂದರೆ ಇದು ಅನೇಕ ಸದ್ಗುಣಗಳನ್ನು ಒಳಗೊಂಡಿದೆ (1 ಕೊರಿಂಥ 13:4-7)

ಪ್ರೀತಿಯ ಗುಣಲಕ್ಷಣಗಳನ್ನು ಓದುವ ಮೂಲಕ ಅನೇಕ ಸಂಗತಿಗಳನ್ನು ಕಲಿಯುತ್ತೇವೆ.

### ಪ್ರೀತಿಯು ಎಲ್ಲಾ ಅದ್ಭುತೀಯ ವರಗಳಿಗಿಂತ ಯಾಕೆ ಶ್ರೇಷ್ಟವಾಗಿದೆ ಎಂದು ಕಲಿಯುತ್ತೇವೆ

ಮೊದಲನೆಯ ಶತಮಾನದಲ್ಲಿ ಪ್ರೀತಿಯ ಎಲ್ಲ ಅದ್ಭುತೀಯ ವರಗಳಿಗಿಂತ ಯಾಕೆ ಶ್ರೇಷ್ಟ ವಾಗಿತ್ತು ಎಂಬುದಕ್ಕೆ ಈ ಪರಿಚ್ಛೇದದಲ್ಲಿ ಎರಡು ಕಾರಣಗಳು ಸೂಚಿಸಲ್ಪಟ್ಟಿವೆ.

ಒಂದು ಕಾರಣಕ್ಕಾಗಿ ಪ್ರೀತಿ ಶ್ರೇಷ್ಟವಾಗಿದೆ, ಯಾಕೆಂದರೆ ಇದು ಅದ್ಭುತ ಶಕ್ತಿಯ ವರಗಳನ್ನು ಉತ್ಪಾದಿಸುವದಂಹ ಗುಣಗಳನ್ನು ಕ್ರಿಸ್ತೀಯನ ಜೀವಿತದಲ್ಲಿ ಉತ್ಪಾದಿಸುವುದಾಗಿದೆ. ಪ್ರೀತಿಯು ಸಹನೆ ಮತ್ತು ಕರುಣೆಯನ್ನು ಹೊಂದಿದೆ ಹೊರತಾಗಿ ಹೊಟ್ಟೆಕಿಚ್ಚು ಅಥವಾ ಹೂಳಿಕೊಳ್ಳುವಿಕೆ ಇಲ್ಲದ್ದು, ನಿಸ್ವಾರ್ಥವುಳ್ಳದ್ದೂ ಆಗಿದೆ ಎಂದು ಪೌಲನು ಹೇಳಿದ್ದಾನೆ. ಆದರೆ ಆತ್ಮನ ಯಾವುದೇ ವ್ಯಕ್ತಿಗತ ಅದ್ಭುತೀಯ ವರಗಳ ಬಗೆಗೆ ಅಥವಾ ಒಂದು ಪದ್ಧತಿಯ ಅದ್ಭುತೀಯ ವರಗಳನ್ನು ಪದ್ಧತಿಯಂತೆ ಇದನ್ನು ನೀವು ಹೇಳಲಾರಿರಿ.

ಇನ್ನೊಂದು ಕಾರಣಕ್ಕಾಗಿ ಪ್ರೀತಿ ಶ್ರೇಷ್ಟವಾಗಿದೆ, ಯಾಕೆಂದರೆ ಅದ್ಭುತೀಯ ವರಗಳು ಕೊರಿಂಥ ಸಭೆಯಲ್ಲಿ ಸಮಸ್ಯೆಯಾಗಿ ಪರಿಣಮಿಸಿದ್ದವು, ಆದರೆ ಪ್ರೀತಿಯು ಎಲ್ಲಾ ಸಮಸ್ಯೆಗಳ ಪರಿಹಾರದ ಮಂತ್ರವಾಗಿದೆ. ಅದ್ಭುತೀಯ ವರಗಳು ತಿಕ್ಕಾಟದ ಮೂಲಕಾರಣವಾಗಿದ್ದವು. ಅಧ್ಯಾಯ 12 ಮತ್ತು 14ರಲ್ಲಿ ಯಾರು ಹೆಚ್ಚೆಚ್ಚು ವರಗಳನ್ನು ಪಡೆದಿದ್ದಾರೆ ಎಂದು ಕೊರಿಂಥಿಯನ್ನರು ವಾದಮಾಡುತ್ತಿದ್ದರು. ಅವರು ಯಾವುದನ್ನು ಒಳ್ಳೆಯವ ವರ ಎಂದು ಪರಿಗಣಿಸಿದ್ದರೋ ಅದಕ್ಕೆ ಕೀಳಾಗಿ ಕಂಡಂಥವರು ತಾವು ಪರಿಗಣಿಸಿದ ವರಗಳ ಒಳ್ಳೆಯವು

ಎಂಬುದರ ಬಗೆಗೆ ತೀರ್ಮಾನಕ್ಕೆ ಬರುವವರಾಗಿದದ್ದರು. ಅದನ್ನು ಹೊಂದಿದವರ ಕೀಳಾದ ವರಗಳು ಅನವಶ್ಯಕವಾದವುಗಳು ಎಂದು ಯೋಚಿಸುವವರಾಗಿದ್ದಾರೆ ಮುಂದೆ ಕೊರಿಂಥ ಸಭೆಯೂ ಕೂಡಾ ಅದ್ಭುತೀಯ ವರಗಳಲ್ಲಿ ಸಮೃದ್ಧವಾಗಿದ್ದು, ಎಲ್ಲಾ ತರದ ಆತ್ಮೀಕ ಸಮಸ್ಯೆಗಳಿಂದ ಆಕ್ರಮಿತವಾದದು ಆಗಿತ್ತು. ಆತ್ಮನ ಅದ್ಭುತೀಯ ವರಗಳು ಅವರ ಆತ್ಮೀಕ ಸಮಸ್ಯೆಗಳನ್ನು ಪರಿಹರಿಸಲಾರವು, ಆದರೆ ಪ್ರೀತಿಯು ಮಾಡಬಹುದಾಗಿದೆ!

ಪ್ರೀತಿಯು ಸಮಸ್ಯೆಗಳನ್ನು ಪರಿಹರಿಸುವುದಾಗಿದೆ, ಉದಾಹರಣೆಗಾಗಿ, ಕೊರಿಂಥದಲ್ಲಿನ ಕ್ರೈಸ್ತರು ಹೊಟ್ಟೆಕಿಚ್ಚುಳ್ಳರು ಅಥವಾ ಹೊಗಳಿಕೊಳ್ಳುವವರು ಆಗಿರದೇ ಹೋಗಿದ್ದರೆ ಅವರ ವರಗಳಲ್ಲಿನ ಭಿನ್ನತೆಯು ಅವರಲ್ಲಿ ಭಿನ್ನತೆಯನ್ನು ತರುತ್ತಿರಲ್ಲಿಲ್ಲ. ಅವರು ವಿಗ್ರಹಗಳ ಮುಂದೆ ಇಡಲಾದ ಮಾಂಸವನ್ನು ತಿನ್ನುಬೇಕೋ ಬೇಡವೋ ಸಮಸ್ಯೆ ಅವರಲ್ಲಿ ಉದ್ಭವಿಸಿದ್ದರೂ ಕೂಡಾ ಅವರು ನಿಸ್ವಾರ್ಥಿಗಳು ಆಗಿಲ್ಲದಿದ್ದರೆ, ಅವರು ಒಬ್ಬರನ್ನೊಬ್ಬರು ಪರಿಗಣಿಸುವವರಾಗಿರುತ್ತಿದ್ದರು ಹೊರತು ಕೇವಲ ತಮ್ಮ ಅಶೋತ್ತರಗಳನ್ನಲ್ಲ. ಆದರೆ ಅವರು ತಪ್ಪಾದುದರಲ್ಲಿ ಸಂತೋಷಿಸದವರಾಗಿದ್ದು, ಸರಿಯಾದುದರಲ್ಲಿ ಸಂತೋಷಿ ಸುವವರಾಗಿದ್ದರೆ, ಅವರು ಸಭೆಯಲ್ಲಿ ಪಾಪವನ್ನು ಸಹಿಸಿಕೊಳ್ಳುವವರಾಗಿರುತ್ತಿರಲಿಲ್ಲ. ಅವರು ತಾಳ್ಮೆಯುಳ್ಳವರೂ ಕರುಣೆಯುಳ್ಳವರೂ ಆಗಿದ್ದಾದರೆ ಮತ್ತು ಮುಂಗೋಪಿ ಅಥವಾ ಉದ್ರಿಕ್ತರಾಗಿಲ್ಲದಿದ್ದರೆ, ಸಭೆಯಲ್ಲಿಯ ಅನೈಕ್ಯಮತದ ಸಮಸ್ಯೆಯು ಪರಿಹಾರವಾಗುತ್ತಿತ್ತು. ಇನ್ನೊಂದು ಮಾತಿನಲ್ಲಿ, ಅದ್ಭುತೀಯ ವರಗಳಿಂದಾದ ಕೆಟ್ಟದಾದ್ದುದರ ಸಮಸ್ಯೆಯನ್ನು ಪ್ರೀತಿಯು ಮಾತ್ರ ಪರಿಹರಿಸುತ್ತದೆ.

**ಹೊಸ ಒಡಂಬಡಿಕೆಯ ಅರ್ಥವನ್ನು ನಾವು ಕಲಿಯುವವರಾಗಿದ್ದೇವೆ**

ಪ್ರೀತಿ ಎಂಬ ಪದವನ್ನು ಅನೇಕ ರೀತಿಯಲ್ಲಿ ನಾವು ಬಳಸುತ್ತೇವೆ: ನಾವು ಹೀಗೆ ಹೇಳ ಬಹುದು. "ನಾನು ನನ್ನ ಹೆಂಡತಿಯನ್ನು ಪ್ರೀತಿಸುತ್ತೇನೆ"; "ನಾನು ನನ್ನ ಸ್ನೇಹಿತರನ್ನು ಪ್ರೀತಿ ಸುತ್ತೇನೆ"; "ನಾನು ನನ್ನ ನಾಯಿಯನ್ನು ಪ್ರೀತಿಸುತ್ತೇನೆ"; "ನಾನು ನನ್ನ ದೇಶವನ್ನು ಪ್ರೀತಿ ಸುತ್ತೇನೆ"; "ನಾನು ನನ್ನ ಆ್ಯಪಲ್ ಪೈಯನ್ನು ಪ್ರೀತಿಸುತ್ತೇನೆ" ಅದೇ ತರ ಹುಮ್ಮಸ್ಸಿನೊಡನೆ ಇರುವುದಾಗಿದೆ. ನಾವು ಪ್ರೀತಿಯ ಬಗೆಗೆ ಮಾತನಾಡುವಾಗ ಯಾವಾಗಲೂ ಬಹುವಾಗಿ ಭಾದ್ರೇಕದಿಂದ, ಅನುಭವದಿಂದ ಇರುವವರಾಗಿದ್ದೇವೆ.

ಇದಕ್ಕೆ ವ್ಯತ್ಯಾಸವಾಗಿ ಬಳಸಲ್ಪಟ್ಟ "ಪ್ರೀತಿ" ಎಂಬ ಪದಕ್ಕೆ 1 ಕೊರಿಂಥ 13ರಲ್ಲಿ *ಆಗಫೆ* ಎಂಬ ಗ್ರೀಕ್ ಪದವನ್ನು ಚಿಕ್ಕದರ ಜೊತೆ, ಭಾವನಾತ್ಮಕ ಸಂಗತಿಗಳೊಡನೆ ಬಳಸಲಾಗಿದೆ. *ಆಗಫೆಯು* ಮೂಲತವಾಗಿ ಸಂವೇದನೆ ಅಥವಾ ಭಾವದ್ರೇಕ ಅಲ್ಲದ್ದು ಆಗಿದೆ. ಇದು ವಾಸ್ತವವನ್ನು ಪ್ರಾಯೋಗಿಸುವ ಒಂದು ಮಾರ್ಗವಾಗಿದ್ದು ನಾವು ಪ್ರೀತಿಮಾಡುವುದಕ್ಕೆ ಆಜ್ಞಾಪಿಸಲ್ಪಟ್ಟಿದ್ದೇವೆ ಎಂಬುದನ್ನು ನೆನಪಿಸಿಕೊಳ್ಳಿರಿ. ಆದರೆ ಸಂವೇದನೆಯು ಆಜ್ಞಾಪಿತವಾ ದದ್ದಲ್ಲ. ಆಜ್ಞೆಗಳು ಚಿತ್ತವನ್ನು ಹೆಸರಿಸುವಂತವುಗಳು ಆಗಿವೆ. ಹೀಗೆ ನಮಗೆ ಅವಶ್ಯವಿರುವ ಪ್ರೀತಿಯು ಭಾವನೆಯನ್ನು ಹೊಂದಿರುವುದಿಲ್ಲ, ಆದರೆ ನಾವು ಮಾಡಬಯಸುವಂತದ್ದು ಆಗಿದೆ. ಆದರೆ ಚಿತ್ತದೊಂದಿಗೆ ನಾವು ಯಾವುದೇ ಸಂವೇದನೆಯಿಲ್ಲದೇ ಹಾಗೆ ಮಾಡಬಯಸುತ್ತೇವೆ. ಆದ್ದರಿಂದ *ಆಗಫೆ*, ಒಳ್ಳೆಯ ವಿಚಾರವನ್ನು ಪರಿಗಣಿಸುವಂತದ್ದು ಎಂದಾಗಿದ್ದು, ನೀನು ಪ್ರೀತಿ ಸುವವನಿಗೆ ಒಳ್ಳೆಯದನ್ನು ಮಾಡುವ ನಿರ್ಧಾರವೇ ಆಗಿದೆ.

ಹೀಗೆ "ಪ್ರೀತಿ" ಎಂದರೆ ಇತರರ ಬಗೆಗೆ *ಭಾವನೆಯನ್ನು* ಹೊಂದುವದು ಎಂದಾಗಿದ್ದು ಮಾತ್ರವಲ್ಲ ಇದರ ಅರ್ಥ ಪ್ರೀತಿಯ ಕಾರ್ಯಗಳನ್ನು ನಡೆಸುವದಾಗಿದೆ. ಅಂದರೆ ತಾಳ್ಮೆಯಿಂದ ಇರುವುದು, ಮತ್ತು ನಿಸ್ವಾರ್ಥತೆಯಿಂದ ವರ್ತಿಸುವದು, ವಾದವಾಡುವುದನ್ನು ದುರ್ವತೆಯನ್ನು ಅಥವಾ ಸಿಡುಕುವುದನ್ನು ನಿಕಾರರಿಸುವದು ಎಂದಾಗಿದೆ. ಒಂದರ್ಥದಲ್ಲಿ, ನಾವು ಯಾರನ್ನು ಮೆಚ್ಚುವುದಿಲ್ಲವೋ ಅವರನ್ನು ಕೂಡಾ ಪ್ರೀತಿಸುವುದಾಗಿದೆ; ಇತರರಿಗಾಗಿ ನಾವು ಒಳ್ಳೆಯದನ್ನು

ಹಾರೈಸಬೇಕು, ಇತರರೆಡೆಗೆ ಪ್ರೀತಿಯಿಂದ ವರ್ತಿಸಬೇಕು, ನೀವು ಇತರರನ್ನು ಅವರೆಡೆಗೆ ಲಕ್ಷವಹಿಸಿದಿದ್ದಾಗಲೂ, ಅವರಿಗೋಸ್ಕರ ಯಾವುದೇ ವಾತ್ಸಲ್ಯವಿಲ್ಲದಿದ್ದಾಗಲೂ ಯೋಗ್ಯವಾಗಿ ಆದರಿಸಿರಿ.

**ನಾವು ಪ್ರೀತಿಮಾಡುತ್ತಿರುವುದಾದರೆ ಹೇಗೆ ವರ್ತಿಸಬೇಕು ಎಂದು ನಾವು ಕಲಿತಿದ್ದೇವೆ**

ನಾವು ಪ್ರೀತಿಸಿದ್ದಾದರೆ, *ನಾವು ತಾಳ್ಮೆಯುಳ್ಳವರಾಗುತ್ತೇವೆ;* ನಾವು ಇತರರನ್ನು ಪ್ರೀತಿಸುವಲ್ಲಿ ಸಹಿಸಿಕೊಳ್ಳುವವರು ಆಗಿದ್ದೇವೆ. ನಾವು ಕರುಣೆಯುಳ್ಳವರಾಗಿರುತ್ತೇವೆ, ಇತರರ ಬಗೆಗೆ ಸಂವೇದನೆಯನ್ನು ಹೊಂದಿರುವವರೂ ವಿವೇಚಿಸುವವರೂ ಆಗಿರುತ್ತೇವೆ ಮತ್ತು ಅವರ ಜೀವಿತವು ಸುಲಲಿತವಾಗುವಂತೆ ಮಾಡಲು ಪ್ರಯತ್ನಿಸುವವರಾಗಿರುತ್ತೇವೆ.

ನಾವು ಪ್ರೀತಿಸುವುದಾದರೆ *ನಾವು ಹೊಟ್ಟೆಕಿಚ್ಚು ಪಡೆವು*, ಉದಾಹರಣೆಗಾಗಿ, ಯಾರಾದರೂ ನಾವು ಏನನ್ನು ಪರಿಗಣಿಸುತ್ತೇವೋ ನಮಗಿಂತ ಶ್ರೇಷ್ಟವಾದ ವರ ಎಂದೂ ಅಥವಾ ಯಾರಾದರೂ ನಮಗೆ ಬರಬೇಕೆಂದು ನಾವು ಯೋಚಿಸುತ್ತಿದ್ದ ಹೊಗಳಿಕೆಯನ್ನು ಅಥವಾ ಮುಂಬಡ್ತಿಯನ್ನು ಅಥವಾ ಪ್ರಯಸ್ತಿಯನ್ನು ಪಡೆದಿರುವುದಾದರೆ *ನಾವು ಹೊಟ್ಟೆಕಿಚ್ಚು ಪಡೆವು.* ಅಥವಾ ನಮ್ಮ ವರಗಳಿಗಾಗಿ ನಾವು ಕೊಚ್ಚಿಕೊಳ್ಳಲಾರೆವು; ನಾವು ನಮ್ಮಷ್ಟಕ್ಕೆ ನಾವು ತುಂಬಿ ಹೊರಸೂಸಲಾರೆವು ಮತ್ತು ನಮ್ಮ ದೊಡ್ಡತನ ಮತ್ತು ಸಾಮರ್ಥವು ಇತರರಿಗೆ ಕೊಚ್ಚಿಕೊಳ್ಳುವಿಕೆಯಾಗಬೇರದು. *ನಾವು ಅಹಂಕಾರಿಗಳೂ,* ಜಂಬಗಾರರು, ಬೀಗುವವರೂ, ಅಥವಾ ಅಹಂಕಾರದಿಂದ ತುಂಬಿದವರೂ, ಆಗಿರಬಾರದು; ನಾವು ನಮ್ಮನ್ನು ಇತರರಿಗಿಂತ ಶ್ರೇಷ್ಟರು ಎಂದು ಪರಿಗಣಿಸಬಾರದು.

ನಾವು ಪ್ರೀತಿಸುವುದಾದರೆ, *ನಾವು ಒಟರಾಗಿರಬಾರಬಾರದು;* ಪ್ರೀತಿಯು ಸಭ್ಯವಾದುದು ಎಂದು ಒಂದು ಭಾಗವು ಹೇಳುವುದಾಗಿದೆ. ಅಥವಾ *ನಮ್ಮದೇ ಮಾರ್ಗವನ್ನು ಸೂಚಿಸಲಾರೆವು;* ಯಾವದಕ್ಕಿಂತಲೂ ಹೆಚ್ಚಾಗಿ, ಪ್ರೀತಿಯು ನಿಸ್ವಾರ್ಥಿಯಾಗಿದೆ.

ನಾವು ಪ್ರೀತಿಸುವುದಾದರೆ, *ನಾವು ಕೆಣಕಲ್ಪಡಲಾರೆವು*; KJVಯು ಹೇಳುವಂತೆ, "ಪ್ರೀತಿಯು ಸುಲಭವಾಗಿ ಕೆಣಕಲ್ಪಡುವುದಿಲ್ಲ" ಎಂದು. ನಾವು ಇರಬೇಕಾದಂಥದ್ದನ್ನು ಪ್ರೀತಿಸಿದಾಗ, ಯಾರಾದರೂ ತಟ್ಟಬಹುದೆಂದು ಕಾಯುತ್ತಾ ಭುಜದ ಸುತ್ತಲೂ ಚಕ್ಕೆಯನ್ನು ಹೊತ್ತುಕೊಳ್ಳಲಾರೆವು. ನಾವು ನಿರಂತರವಾಗಿ ನೋಯುತ್ತಿರಬೇಕೆಂದು ನಮ್ಮ ನೋವುಗಳನ್ನು ನಮ್ಮಲ್ಲಿ ಇರಿಸಿಕೊಳ್ಳಲಾರೆವು. ಅಥವಾ ನಾವು ಕೆಣಕಲ್ಪಡೆವು; "ಪ್ರೀತಿಯು ತಪ್ಪುಗಳ ಎಣಿಕೆಯನ್ನು ಇಟ್ಟುಕೊಳ್ಳಲಾರದು" ಎಂದು ಒಂದು ಭಾಷಾಂತರವು ಹೇಳುತ್ತದೆ.

ನಾವು ಪ್ರೀತಿಸುವುದಾದರೆ, *ನಾವು ತಪ್ಪಿನಲ್ಲಿಯೂ ಕೂಡಾ ಸಂತೋಷಿಸುವವರಾಗಿದ್ದೇವೆ.* ಕೆಟ್ಟತನವು ಜಯಿಸಿದಾಗ, ಮತ್ತು ನಮ್ಮ ವೈರಿಗಳಿಗೆ ಕೆಟ್ಟದ್ದು ಸಂಭವಿಸಿದಾಗಲೂ ಕೂಡಾ ನಾವು ಸಂತೋಷಿಸುವದಿಲ್ಲ. ಬದಲಾಗಿ ನಾವು ಯೋಗ್ಯವಾದದ್ದಕ್ಕಾಗಿ ಸಂತೋಷಿಸುವವರು ಆಗಿದ್ದೇವೆ; ಸರಿಯಾದದ್ದು ಯಾವಾಗಲಾದರೂ ಒಳ್ಳೆಯದು ಪ್ರಭುತ್ವ ಪಡೆದಾಗ, ಅಥವಾ ಒಳ್ಳೆಯದು ಸಂಭವಿಸಿದಾಗ, ಅದು ನಮ್ಮ ವೈರಿಗಳಿಗೆ ಸಂಭವಿಸಿದಾಗಲೂ ಕೂಡಾ ನಾವು ಸಂತೋಷಿಸುವವರಾಗಿದ್ದೇವೆ.

ನಾವು ನಿಜವಾಗಿಯೂ ಪ್ರೀತಿಸುವವರಾಗಿದ್ದರೆ: *ನಮ್ಮ ಪ್ರೀತಿಯು ಎಲ್ಲಾ ಸಂಗತಿಗಳನ್ನು ತಾಳಿಕೊಳ್ಳುವುದಾಗಿದೆ.* ನಾವು ಯಾವುದೇ ಸಮಸ್ಯೆಯನ್ನು ಹೊಂದಿದ್ದರೂ ಕೂಡಾ ನಾವು ಪ್ರೀತಿಸುವುದನ್ನು ಮುಂದುವರೆಸಬೇಕು. ನಮ್ಮ ಪ್ರೀತಿಯು ಎಲ್ಲಾ ಸಂಗತಿಗಳನ್ನು ನಂಬುವುದಾಗಿದೆ; ಪ್ರೀತಿಯು ಸಂಶಯಿಸುವುದಿಲ್ಲ ಎಂದು ಈ ಭಾಗವು ಹೇಳುತ್ತದೆ ನಮ್ಮ ಪ್ರೀತಿಯು ಎಲ್ಲಾ ಸಂಗತಿಗಳನ್ನು ನಿರೀಕ್ಷಿಸುವುದಾಗಿದೆ. ನಾವು ಯಾವಾಗಲೂ ಎಲ್ಲರಿಗಿಂತಲೂ ಉತ್ತಮವಾದದ್ದನ್ನು ಬಯಸುವವರಾಗಿರುತ್ತೇವೆ ಮತ್ತು ಒಳ್ಳೆಯದನ್ನು ಪಡೆಯುವ ಸಂಗತಿಗಳನ್ನು ಎದುರುನೋಡುವವರಾಗಿರುತ್ತೇವೆ. ಮತ್ತು *ನಮ್ಮ ಪ್ರೀತಿಯು*

*ಎಲ್ಲಾ ಸಂಗತಿಗಳನ್ನು ಸಹಿಸಿಕೊಳ್ಳುವುದಾಗಿದೆ.* ನಾವು ಹಿಂಸೆಗೊಳಗಾದಾಗ ಅಥವಾ ದ್ವೇಷಕ್ಕೊಳಗಾದಾಗಲೂ ಕೂಡಾ ನಾವು ಪ್ರೀತಿಸುವುದನ್ನು ಮುಂದುವರೆಸುವವರಾಗಿದ್ದೇವೆ.

ನಿನಗೆ ಸಾಧ್ಯವಾದಷ್ಟು ನೀನು ಪ್ರೀತಿಸಬಲ್ಲೆಯಾ? ನೀನು ಹಾಗೆ ಮಾಡಿದ್ದಾದರೆ, ನಿಮ್ಮ ನಡತೆಯ ಸಂಯಮ, ಕರುಣೆ ಸೌಜನ್ಯ ನಿಸ್ವಾರ್ಥತೆ, ಒಳ್ಳೆಯತನ ಮುಂತಾದವುಗಳಿಂದ ವರ್ಣಿಸಲ್ಪಟ್ಟಿರುತ್ತದೆ. ಹೇಗೋ, ಯಾವುದೇ ಮನುಷ್ಯ ಜೀವಿಯು ಪರಿಪೂರ್ಣವಾಗಿ ಪ್ರೀತಿಸುವುದಿಲ್ಲ. ಈ ಗುಣಲಕ್ಷಣಗಳನ್ನು ದೊರಕಿಸಿ ಕೊಳ್ಳುವ ಮೂಲಕ ನಾವು ಈ ತರದ ಪ್ರೀತಿಯಲ್ಲಿ ಬೆಳಯಬೇಕಿದೆ. ಆದರೆ ನಾವು ಬೆಳೆಯುತ್ತಾ ಹೋದಂತೆ ನಾವೇನಾಗಬೇಕೋ ಅದನ್ನು ಆಗುತ್ತೇವೆ.

ಅದು ನಮ್ಮ ಮೇಲೆ ಪ್ರಭಾವ ಬೀರಬೇಕಾದಾಗ, ಸುಮಾರು ಮೂವತ್ತು ವರ್ಷದ ಹಿಂದೆ ನಾನು ಕೇಳಿದಂತಹ ಬೋಧಕರೊಬ್ಬರು ಮಾಡಿದಂತದ್ದನ್ನು ನಾವೂ ಮಾಡಬೇಕಿದೆ. ದೇವರು ಪ್ರೀತಿಯಾಗಿದ್ದಾನೆ ಎಂದು ಬೈಬಲ್ ಹೇಳಿದ್ದಂದಿನಿಂದ, ಈ ಸಾಲಿನಲ್ಲಿ ನೀನು "ದೇವರು" ಎಂಬ ಪದವನ್ನು "ಪ್ರೀತಿ" ಎಂಬುದಕ್ಕೆ ಬದಲಾಯಿಸಬೇಕಾಗಿದೆ: ನೀವು "ದೇವರು ತಾಳ್ಮೆಯೂ ಮತ್ತು ಕರುಣೆಯೂ ಉಳ್ಳವನಾಗಿದ್ದಾನೆ; ದೇವರು ಹೊಟ್ಟೆಕಿಚ್ಚುಪಡುವವನಲ್ಲ ಅಥವಾ ಹೊಗಳಿಕೊಳ್ಳುವವನಲ್ಲ; ದೇವರು ಅಹಂಕಾರಿಯಲ್ಲ ಅಥವಾ ಮರ್ಯಾದೆಗೆಟ್ಟವನೂ ಅಲ್ಲ ..." ಈ ಲೋಕದ ಮೇಲೆ ಪ್ರೀತಿಯ ಜೀವಿತವನ್ನು ಜೀವಿಸಿದಾಗಿನಿಂದಿನಿಂದ, ದೇವರು ಏನಾಗಿದ್ದಾನೆಂದು ಕ್ರಿಸ್ತನು ನಮಗೆ ತೋರಿದ್ದಂದಿನಿಂದ, ನೀವು ಈ ಪರಿಚ್ಛೇದವನ್ನು ಓದುವಾಗ, "ಪ್ರೀತಿ" ಎಂಬ ಪದಕ್ಕೆ ಬದಲಾಗಿ "ಕ್ರಿಸ್ತನು" ಎಂದು ಓದಿಕೊಳ್ಳಿರಿ: "ಕ್ರಿಸ್ತನು ತಾಳ್ಮೆಯೂ ಮತ್ತು ಕರುಣೆಯೂ ಉಳ್ಳವನಾಗಿದ್ದಾನೆ; ಕ್ರಿಸ್ತನು ಹೊಟ್ಟೆಕಿಚ್ಚು ಪಡುವವನಲ್ಲ ಅಥವಾ ಹೊಗಳಿಕೊಳ್ಳುವವನಲ್ಲ; ಕ್ರಿಸ್ತನು ಅಹಂಕಾರಿಯಲ್ಲ ಅಥವಾ ಮರ್ಯಾದೆಗೆಟ್ಟವನೂ ಅಲ್ಲ; ..."

ಆದರೆ ಕ್ರೈಸ್ತರು ಕ್ರಿಸ್ತನನ್ನು ಅನುಕರಿಸುವವರೂ ಆಗಿದ್ದಾರೆ. ಹೀಗಾಗಿ ನೀವು ಹೀಗೆ ಕೂಡಾ ಓದಿಕೊಳ್ಳಬಹುದು: "ಕ್ರೈಸ್ತನು ತಾಳ್ಮೆಯೂ ಮತ್ತು ಕರುಣೆಯೂ ಉಳ್ಳವನಾಗಿದ್ದಾನೆ; ಕ್ರೈಸ್ತನು ಹೊಟ್ಟೆಕಿಚ್ಚುಪಡುವವನಲ್ಲ ಅಥವಾ ಹೊಗಳಿಕೊಳ್ಳುವವನಲ್ಲ; ಕ್ರೈಸ್ತನು ಅಹಂಕಾರಿಯಲ್ಲ ಅಥವಾ ಮರ್ಯಾದೆಗೆಟ್ಟವನೂ ಅಲ್ಲ; ಒಬ್ಬ ಕ್ರೈಸ್ತನು ತನ್ನ ಸ್ವಂತ ಮಾರ್ಗಕ್ಕಾಗಿ ಪಟ್ಟು ಹಿಡಿಯನು. ಆತನು ಪೀಡಿಸುವವನೂ ಅಲ್ಲ ಅಥವಾ ಒರಟೂ ಅಲ್ಲ; ಆತನು ಕೆಟ್ಟದರಲ್ಲಿ ಸಂತೋಷಿಸುವವನಲ್ಲ. ಆದರೆ ಒಳ್ಳೆಯದಕ್ಕಾಗಿ ಸಂತೋಷಿಸುವವನಾಗಿದ್ದಾನೆ. ಒಬ್ಬ ಕ್ರೈಸ್ತನು ಎಲ್ಲಾ ಸಂಗತಿಗಳನ್ನು ಸಹಿಸಿಕೊಳ್ಳುವವನೂ, ಎಲ್ಲ ಸಂಗತಿಗಳನ್ನು ನಂಬುವವನೂ, ಎಲ್ಲಾ ಸಂಗತಿಗಳನ್ನು ನಿರೀಕ್ಷಿಸುವವನೂ, ಎಲ್ಲಾ ಸಂಗತಿಗಳಲ್ಲಿ ಸಂಯಮದಿಂದಿರುವವನೂ ಆಗಿದ್ದಾನೆ."

ಅದರರ್ಥವೆಂದರೆ, ಹೇಗೋ ನಮ್ಮಲ್ಲಿ ಪ್ರತಿಯೊಬ್ಬರೂ ಆ ರೀತಿಯಲ್ಲಿಯೇ ಇರುವವರಾಗಿದ್ದಾರೆ. ಆ ಭಾಗವನ್ನು ಇನ್ನೊಂದು ಸಾರಿ ಓದೋಣ, ಈ ಸಾರಿ ವೈಯಕ್ತಿಕತೆಗೆ ಎಂದರೆ "ನಾನು" ಎಂಬ ಪದವನ್ನು "ಕ್ರೈಸ್ತನು" ಎಂಬುದಕ್ಕೆ ಬದಲಿಯಾಗೆ ಪದವನ್ನು ಉಚ್ಚರಿಸೋಣ. "ನಾನು ತಾಳ್ಮೆಯೂ ಮತ್ತು ಕರುಣೆಯೂ ಉಳ್ಳವನಾಗಿದ್ದೇನೆ; ನಾನು ಹೊಟ್ಟೆಕಿಚ್ಚುಪಡುವವನಲ್ಲ ಅಥವಾ ಹೊಗಳಿಕೊಳ್ಳುವವನಲ್ಲ; ನಾನು ಅಹಂಕಾರಿಯಲ್ಲ ಅಥವಾ ಮರ್ಯಾದೆಗೆಟ್ಟವನೂ ಅಲ್ಲ ನಾನು ನನ್ನ ಸ್ವಂತ ಮಾರ್ಗಕ್ಕಾಗಿ ಪಟ್ಟುಹಿಡಿಯುವವನೂ. ಪೀಡಿಸುವವನೂ ಅಲ್ಲಾ ಅಥವಾ ಒರಟನೂ ಅಲ್ಲ; ನಾನು ಕೆಟ್ಟದರಲ್ಲಿ ಸಂತೋಷಿಸುವವನಲ್ಲ. ಆದರೆ ಒಳ್ಳೆಯದಕ್ಕಾಗಿ ಸಂತೋಷಿಸುವವನಾಗಿದ್ದೇನೆ. ನಾನು ಎಲ್ಲಾ ಸಂಗತಿಗಳನ್ನು ಸಹಿಸಿಕೊಳ್ಳುವವನೂ, ಎಲ್ಲಾ ಸಂಗತಿಗಳನ್ನು ನಂಬುವವನೂ, ಎಲ್ಲಾ ಸಂಗತಿಗಳನ್ನು ನಿರೀಕ್ಷಿ ಸುವವನೂ, ಎಲ್ಲಾ ಸಂಗತಿಗಳಲ್ಲಿ ಸಮಯದಿಂದಿರುವವನೂ ಆಗಿದ್ದೇನೆ." ಆತರದ ನಮ್ರವಾದ ಅನುಭವವನ್ನು ನಾನು ಕಂಡುಕೊಂಡಿದ್ದೇನೆ. ಸಾಕಾಗದ ವಿವರಣೆಗೆ ನಾನು

ಸುತಾರಾಂ ಇಳಿಯುವವನಾಗಿದ್ದೇನೆ. ನಿನ್ನ ಬಗೆಗೆ ಏನು? ಅಲ್ಲಿರುವ ಸಂಗತಿಯೆಂದರೆ, ಎಷ್ಟರ ಮಟ್ಟಿನ ತಗ್ಗಿಗೆ ನಾವೀಗ ಇಳಿಯುವವರಾಗಿದ್ದೇವೆ ಎಂಬುದು ಇಲ್ಲಿನ ವಿಷಯವಲ್ಲ. ಆ ತರದ ಜನರಾಗುವುದಕ್ಕಾಗಿ ನಾವು ಹೋರಾಡಬೇಕಾಗಿದೆ!

## ಪ್ರೀತಿಯು ಜಗತ್ತಿನ ಶ್ರೇಷ್ಟ ಸಂಗತಿಯಾಗಿದೆ ಯಾಕೆಂದರೆ ಪ್ರೀತಿಗೆ ಎಂದೂ ಕೊನೆಯಿಲ್ಲ (1 ಕೊರಿಂಥ 13:8-13)

"ಪ್ರೀತಿಗೆ ಎಂದೂ ಕೊನೆಯಿಲ್ಲ" ಪ್ರೀತಿಯು ಜಗತ್ತಿನ ಶ್ರೇಷ್ಟ ಸಂಗತಿಯಾಗಿದೆ ಎಂಬುದಕ್ಕೆ ಇದೊಂದೇ ಕಾರಣವಾಗಿದೆ!

ಈ ವ್ಯತ್ಯಾಸವಾದ ಪ್ರೀತಿಯು ಅದ್ಭುತವಾದ ವರದ ಜೊತೆಯಿರುವುದಾಗಿದೆ. ಪೌಲನು 1 ಕೊರಿಂಥ 12:8-10ರಲ್ಲಿ ಒಂಬತ್ತು ವಿಧವಾದ ವರಗಳ ಬಗೆಗೆ ಮಾತನಾಡಿದ್ದಾನೆ. 1 ಕೊರಿಂಥ 13:8ರಲ್ಲಿ ಈ ಮೂರನ್ನೂ ಸೂಚಿಸಿದ್ದಾನೆ ಮತ್ತು ಈ ಮೂರು ಅಳಿದು ಹೋಗಿವೆ ಎಂದು ಆತನು ಖಚಿತಪಡಿಸಿದ್ದಾನೆ. ಆ ಮೂರು, ಎಲ್ಲಾ ಆ ಒಂಬತ್ತು ಅಂಶಗಳನ್ನು ಪ್ರತಿನಿಧಿಸುವವು ಗಳಾಗಿವೆ ಎಂದು ನಾನು ನಂಬುತ್ತೇವೆ. ಆ ಮೂರು ಅಳಿದು ಹೋಗಿವೆ ಎಂದು ಪೌಲನು ಹೇಳಿದಾಗ, ಆ ಎಲ್ಲಾ ಒಂಬತ್ತೂ ಸಹ ಅಳಿದು ಹೋದಂತಾಯಿತು. ಅದ್ಭುತವರಗಳ ಸಮಸ್ತ ಸಮೂಹ ಅದರೊಂದಿಗೆ ಅಳಿದು ಹೋಗುತ್ತದೆ ಆದರೆ ಪ್ರೀತಿಯು ಉಳಿದುಕೊಳ್ಳುತ್ತದೆ!

ಆ ಅದ್ಭುತ ವರಗಳು ಯಾವಾಗ ಅಳಿದು ಹೋಗುತ್ತವೆ? ಪೌಲನು ಸಮಯದ ಪ್ರಬುದ್ಧತೆಯ ಬಗೆಗೆ ಮಾತನಾಡುತ್ತಿದ್ದಾನೆ. ಯಾವದು ಅಪರಿಪೂರ್ಣ (1 ಕೊರಿಂಥ 13:9) ಅಥವಾ ಅಪರಿಪಕ್ವವಾಗಿಯೋ ಎಂಬುದರ ಜೊತೆ ವರಗಳು ಕಾರ್ಯಮಾಡುವವುಗಳು ಆಗಿವೆ. ಆದರೆ ಯಾವಾಗ ಪರಿಪಕ್ವತೆಯ "ನಿರ್ದಿಷ್ಟ" ಸಮಯವು ಬಂದಾಗ ಆ ಸಮಯದಲ್ಲಿ ಅಪರಿಪಕ್ವತೆಯು ಬಿಟ್ಟುಹೋಗುತ್ತದೆ (1 ಕೊರಿಂಥ 13:10). ಅದ್ಭುತೀಯ ವರಗಳ ಸಮೂಹವು ಬಾಲಕರಲ್ಲಿನ ಪ್ರಬುದ್ಧತೆಯಂತಿರುತ್ತದೆ (1 ಕೊರಿಂಥ 13:11). ಆದರೆ ಪರಿಪಕ್ವತೆಯು ಬಂದಾಗ, ಒಬ್ಬ ಮನುಷ್ಯನು ತನ್ನ ಮಗುತನದ ಮಾರ್ಗಗಳಿಂದ ಬೆಳೆದು ದೊಡ್ಡವನಾದಾಗ ಆತನ ಹುಡುಗತನವು ಮಾಯವಾಗುವ ಹಾಗೆ ಅದು ಹೊರಟು ಹೋಗುತ್ತದೆ (1 ಕೊರಿಂಥ 13:11). ಅದ್ಭುತೀಯ ವರಗಳ ಸಮೂಹವು ಕನ್ನಡಿಯಲ್ಲಿ ನೋಡಿಕೊಳ್ಳುವಂತಿದ್ದು ನಿಮಗೆ ಸ್ಪಷ್ಟವಾದ ಚಿತ್ರಣವನ್ನು ಕೊಡುವುದಿಲ್ಲ, ಆದರೆ ಪರಿಪಕ್ವತೆಯಂಥ ಕನ್ನಡಿಯಲ್ಲಿ ನಿನ್ನನ್ನು ನೀವು ಸ್ಪಷ್ಟವಾದ ಪ್ರತಿಬಿಂಬದಲ್ಲಿ ನೋಡಬಹುದಾಗಿದೆ (1 ಕೊರಿಂಥ 13:12) ಪರಿಪಕ್ವತೆಯ ಸಮಯವು - ಆತ್ಮನ ಅಧ್ಭುತೀಯ ವರಗಳು ಉಪಯೋಗಿಸಲ್ಪಡುತ್ತಿದ್ದಾಗ - ಇದು ಕೇವಲ ಅಪೂರ್ಣವಾದುದನ್ನು ತಿಳಿದುಕೊಳ್ಳುವ ಸಮಯ ಆಗಿದೆ; ಪರಿಪಕ್ವತೆಯ ಸಮಯವು ಸಂಪೂರ್ಣವಾಗಿ ತಿಳಿದು ಕೊಳ್ಳುವ ಸಮಯವು ಆಗಿದೆ (1 ಕೊರಿಂಥ 13:12).

ಪರಿಪಕ್ವತೆಯ ಸಮಯವು ಯಾವಾಗ ಬರುತ್ತದೆ? ಇದು ಕ್ರಿಸ್ತನು ಮರಳಿ ಬಂದಾಗ ಬರುತ್ತದೆ ಎಂದು ಕೆಲವರು ಯೋಚಿಸುವವರಾಗಿರುತ್ತಾರೆ. ಅವರು ವಚನ 10ರಲ್ಲಿನ - "ಸಂಪೂರ್ಣವಾದದು ಬಂದಾಗ" - ಎಂಬುದನ್ನು ನಂಬುವವರಾಗಿದ್ದು - ಇದು ಕ್ರಿಸ್ತನನ್ನು ಸೂಚಿಸುವುದಾಗಿದ್ದು, ಅದು "ಕ್ರಿಸ್ತನು ಹಿಂತಿರುಗಿದಾಗ" ಎಂಬುದನ್ನು ಹೇಳುವುದಾಗಿದೆ. ಈ ವ್ಯಾಖ್ಯಾನದೊಂದಿಗೆ ಅನೇಕ ಸಮಸ್ಯೆಗಳು ಇವೆ ಆದರೆ ಅದರಲ್ಲಿನ ಒಂದು ಪದವು ಅಪಕ್ವವಾದುದಾಗಿದೆ. ಇದು ಅಕ್ಷರ ಸಹ, "ಪರಿಪೂರ್ಣವಾದದ್ದು ಬಂದಾಗ ..." ಎಂದು ಹೇಳುವುದಾಗಿದೆ. ಇದು ಬಲು ಅಸಂಭನೀಯವಾದಂತಿದ್ದು, ಇದು ಅಲ್ಪವಾದದ್ದನ್ನು ಹೇಳು ವುದಾಗಿದ್ದು, ಕ್ರಿಸ್ತನು ನಪುಂಸಕಲಿಂಗ ವಸ್ತುವಿನಂತೆ ಪೌಲನು ಸೂಚಿಸುವವನಾಗಿದ್ದಾನೆ! ಈ ಸಂದರ್ಭದ ಇನ್ನೊಂದು ಸಮಸ್ಯೆಯೆಂದರೆ ಅದ್ಭುತೀಯ ವರಗಳ ಅರಿಕೆಯನ್ನು ಪೌಲನು ತೋರಿಸಲು ಯತ್ನಿಸುತ್ತಿದ್ದಾನೆ. ಕ್ರಿಸ್ತನ ಎರಡನೆಯ ಬರೋಣದ ತನಕ ಅದ್ಭುತೀಯ ವರಗಳ

ಸಂಪೂರ್ಣ ಸಮೂಹವು ಕೊನೆಯಲ್ಲಿರುವದು ಎಂದು ಆತನು ಹೇಳಿದ್ದಾದರೆ, ಆತನು ತನ್ನ ಉದ್ದೇಶವನ್ನು ಸೋಲಿಸಿದಂತಾಗುತ್ತಿತ್ತು! ಅದ್ಭುತೀಯ ವರಗಳು ಕ್ರಿಸ್ತನ ಎರಡನೆಯ ಬರೋಣವನ್ನು ಮೀರಿ ಕೊನೆಯಲ್ಲಿರುವವು ಎಂಬುದ ಕೊರಿಂಥದವರ ಮೇಲೆ ಯಾವ ವ್ಯತ್ಯಾಸವನ್ನು ಉಂಟುಮಾಡುತ್ತಿರಲಿಲ್ಲ; ಅವರು ಕೇವಲ ಈ ಜೀವಿತದಲ್ಲಿ ಆತರದ ವರಗಳ ಬಗೆಗೆ ಆಸಕ್ತಿಯುಳ್ಳವರಾಗಿದ್ದರು. ಆ ವರಗಳು ಕೊನೆಯ ತನಕ ಇರುವವುಗಳು ಎಂದು ಕೇಳುವುದರಲ್ಲಿ ಸಂತೋಷಿಸುವವರಾಗಿದ್ದರು. ಆ ವರಗಳ ಮೇಲೆ ಆತುಕೊಳ್ಳುವ ನೀವು ಎಷ್ಟು ಮೂರ್ಖರು ಎಂದು ನಾನು ನಿಮಗೆ ತೋರಿಸುತ್ತೇನೆ. ಒಂದು ಸಂಗತಿಗೆ, ಅವರು ಕೇವಲ ಇನ್ನೊಂದು ಎರಡು ಸಾವಿರ ವರ್ಷದವರೆಗೆ, ಕ್ರಿಸ್ತನು ಬರುವವರೆಗೆ ಕಾಯವವರಾಗಿದ್ದಾರೆ ಎಂದು ಪೌಲನು ಅವರಿಗೆ ಹೇಳಬಹುದು ಎಂದು ನನಗೆ ಖಚಿತವಿದೆ! ಈ ಎರಡು ಕಾರಣಗಳಿಗೋಸ್ಕರ, ಪೌಲನು ಕ್ರಿಸ್ತನ ಬರೋಣವನ್ನು ಸೂಚಿಸುತ್ತಿಲ್ಲ.

ಈಗ ಪೌಲನು ಸೂಚಿಸುತ್ತಿರುವುದಾದರೂ ಏನು? ಚರ್ಚಿನ ಪರಿಪಕ್ವತೆಯೇ! ಚರ್ಚು ಇನ್ನೂ ಶೈಶವಾಸ್ಥೆಯಲ್ಲಿಯೇ ಇದೆ! ಇದು ಮಗುವಿನ ಹಾಗೆ ಇದೆ. ಚರ್ಚಿಗೆ ತನ್ನ ಬಾಲ್ಯದ ಮೂಲಕ ಅದ್ಭುತೀಯ ವರಗಳ ಅವಶ್ಯಕತೆಯು ಇದೆ. ಆದರೆ ಅದು ಆ ಬಾಲ್ಯವಸ್ಥೆಯನ್ನು ದಾಟಿಹೋಗಿ ಮತ್ತು ದೇವರ ಪ್ರಕಟಣೆಯಲ್ಲನ್ನು ಪಡೆದುಕೊಂಡಿರುವುದರಿಂದ ಇನ್ನು ಮುಂದೆ ಅದಕ್ಕೆ ಅದ್ಭುತೀಯ ವರಗಳ ಅವಶ್ಯಕತೆಯು ಇಲ್ಲ. ಆದ್ದರಿಂದ ಕ್ರಿಸ್ತನ ಪರಿಪಕ್ವತೆಯು "ಪರಿಪೂರ್ಣವಾದದ್ದು ಬಂದಾಗ" ಎಂಬುದನ್ನು ಸೂಚಿಸುವುದಾಗಿದೆ.

ಆದರೆ ನೆನಪಿಡಬೇಕಾದ ಮಹತ್ವದ ಸಂಗತಿ ಎಂದರೆ ಪರಿಶುದ್ಧಾತ್ಮನ ಅದ್ಭುತೀಯ ವರಗಳು ಎಲ್ಲಿ ದಾಟಿಹೋದವು, ಚರ್ಚಿನ ಪರಪಕ್ವತೆಯ ನಂತರವೂ ಕೂಡ ಪ್ರೀತಿಯು ಮುಂದುವರೆಯುವುದಾಗಿದೆ ಎಂಬುದೇ!

ಆದರೆ 1 ಕೊರಿಂಥದ ನಂತರದ ಭಾಗವು ಸಹ ಪ್ರೀತಿಯ ಜೊತೆ ನಂಬಿಕೆ ಮತ್ತು ನಿರೀಕ್ಷೆಯ ವ್ಯತ್ಯಾಸವನ್ನು ಉಂಟುಮಾಡುವುದಾಗಿದೆ. "ಪ್ರೀತಿಯು ಎಂದಿಗೂ ವಿಫಲವಾಗದು" ಎಂಬುದನ್ನು ಗಮನಿಸಿರಿ; ಅದ್ಭುತೀಯ ವರಗಳು ಅಳಿದು ಹೋದವು ಎಂದು ಆತನು ನಂತರದಲ್ಲಿ ಹೇಳುತ್ತಾನೆ; ಮತ್ತು ಆತನು ಅಂತಿಮವಾಗಿ, "ನಂಬಿಕೆ ನಿರೀಕ್ಷೆ ಪ್ರೀತಿ ಈ ಮೂರೇ ನಿಲ್ಲುತ್ತದೆ" ಎಂದು ಹೇಳುತ್ತಾನೆ. ಪರಿಶುದ್ಧಾತ್ಮನ ಅದ್ಭುತೀಯ ವರಗಳು ಅಳಿದು ಹೋದವು, ಆದರೆ ಮೂರು ಸಂಗತಿಗಳು ಇನ್ನೂ ಉಳಿಯುತ್ತವೆ, ಅಥವಾ ಹೊಂದಿಕೊಂಡಿರುತ್ತವೆ; ನಂಬಿಕೆ ನಿರೀಕ್ಷೆ ಪ್ರೀತಿ! ಅದ್ಭುತೀಯ ವರಗಳು ಹೋದ ನಂತರ ನಂಬಿಕೆ ನಿರೀಕ್ಷೆ ಮತ್ತು ಪ್ರೀತಿ ಇನ್ನು ಉಳಿಯುತ್ತವೆ, ಆದ್ದರಿಂದ, ಇವು ಪರಿಶುದ್ಧಾತ್ಮನ ಅದ್ಭುತೀಯ ವರಗಳಿಗಿಂತ ಶ್ರೇಷ್ಟವಾದದ್ದಾಗಿವೆ.

ನಂತರ ಪೌಲನು, "ಅದರಲ್ಲಿ ಶ್ರೇಷ್ಟವಾದದ್ದು ಪ್ರೀತಿಯೇ" ಎಂದು ಹೇಳುತ್ತಾನೆ. ಪ್ರೀತಿಯು ನಂಬಿಕೆ ಅಥವಾ ನಿರೀಕ್ಷೆಗಿಂತ ಏಕೆ ಶ್ರೇಷ್ಟವಾದದ್ದಾಗಿದೆ? ಅಲ್ಲಿ ಅನೇಕ ಉತ್ತರಗಳು ಇರಬಹುದು. ಪ್ರೀತಿಯು ನಂಬಿಕೆ ಮತ್ತು ನಿರೀಕ್ಷೆಗಳಿಗಿಂತ ಶ್ರೇಷ್ಟವಾದದ್ದು ಎಂದು ಹೇಳು ವುದಕ್ಕೆ ಈ ಸಂದರ್ಭದಲ್ಲಿ ಕಾರಣವು ಇದ್ದು ಪ್ರೀತಿಯು ನಂಬಿಕೆ ಮತ್ತು ನಿರೀಕ್ಷೆಗಳಿಗಿಂತ ಹೆಚ್ಚಾಗಿ ಉಪಯೋಗಕ್ಕೆ ಬರುವಂತದ್ದಾಗಿದೆ.

ಕ್ರಿಸ್ತನು ಹಿಂತಿರುಗಿದಾಗ, ಅಲ್ಲಿ ಇನ್ನು ಮುಂದೆ ನಂಬಿಕೆಯು ಇರುವುದಿಲ್ಲ, ನಿರೀಕ್ಷೆಯು ಇರುವುದಿಲ್ಲ. ನಾವು ನಂಬಿದವುಗಳಲ್ಲಿ ಅದರಲ್ಲಿ ಒಂದನ್ನು ನಾವು ನೋಡಿದ್ದೇವೆ; ಆದರೆ, "ಕಣ್ಣಿಗೆ ಕಾಣದ್ದನ್ನು" ಮತ್ತು "ಕಾಣುವವಗಳ" ಜೊತೆ ವ್ಯತ್ಯಾಸದ ನಂಬಿಕೆಯು ಒಳಗೊಂಡಿರುವುದರಿಂದಾಗಿ ಅದರ ಅರ್ಥ ಆ ನಂಬಿಕೆಯಲ್ಲಿ ಇನ್ನಿಲ್ಲ. (ನೋಡಿ ಇಬ್ರಿಯ 11:1; 2 ಕೊರಿಂಥ 5:7.) ಇನ್ನೂ ಮುಂದಾಗಿ, ಕ್ರಿಸ್ತನು ಮರಳಿಬಂದಾಗ, ನಿರೀಕ್ಷೆಯು ತನ್ನ ಸಂಪೂರ್ಣತೆಯನ್ನು ಕಂಡುಕೊಳ್ಳುತ್ತದೆ. ನಾವು ಯಾವುದಕ್ಕೋಸ್ಕರ ನಿರೀಕ್ಷಿಸುವವರಾಗಿ ದ್ದೇವೆ ಎಂಬುದನ್ನು ಹೊಂದಿದ್ದರೆ, ಅಲ್ಲಿ ಇನ್ನು ಮುಂದೆ ನಿರೀಕ್ಷೆಯು ಇರದು (ರೋಮಾಪುರ

8:24, 25). ಕ್ರಿಸ್ತನು ಹಿಂತಿರುಗಿದಾಗ ಹೇಗೋ ಅಲ್ಲಿ ಪ್ರೀತಿಗೆ ಇನ್ನು ಕೊನೆಯು ಇಲ್ಲ. ಆಗ ಮತ್ತು ದೇವರಿಂದ ಮತ್ತು ನಿರೀಕ್ಷೆಯು ಕ್ರಿಸ್ತನ ಬರೋಣದಲ್ಲಿ ಕೊನೆಯಾಗುತ್ತದೋ ಆಗ ಪ್ರೀತಿಯು ಮುಂದುವರೆಯುತ್ತದೆ. ಆದ್ದರಿಂದ ಶ್ರೇಷ್ಠ ನಂಬಿಕೆ ಮತ್ತು ನಿರೀಕ್ಷೆಗಳಿಗಿಂತಲೂ ಪ್ರೀತಿಯು ಇನ್ನು ಶ್ರೇಷ್ಟವಾದದ್ದಾಗಿದೆ. ಪ್ರೀತಿಯು ಜಗತ್ತಿನಲ್ಲಿ ಶ್ರೇಷ್ಟವಾದದ್ದಾಗಿದೆ.

## ಮುಕ್ತಾಯ

1 ಕೊರಿಂಥ 13ರಲ್ಲಿ ಪೌಲನ ಸಂದೇಶವು ಪ್ರೀತಿಯು ಜಗತ್ತಿನಲ್ಲಿ ಶ್ರೇಷ್ಟವಾದದ್ದಾಗಿದೆ ಎಂಬುದೇ. ಇಲ್ಲಿನ ಪ್ರಶ್ನೆ ಎಂದರೆ: ಪ್ರೀತಿಯೂ ನಮಗೆ ಶ್ರೇಷ್ಟವಾದದ್ದಾಗಿದೆಯಾ?

ಚರ್ಚಿನಲ್ಲಿ ಪ್ರೀತಿಯಲ್ಲು ಶ್ರೇಷ್ಟವಾದದ್ದಾಗಿದೆಯಾ? ಚರ್ಚು ಪ್ರೀತಿಗೆ ಸಾಕಷ್ಟು ಒತ್ತನ್ನು ಕೊಟ್ಟಿದೆಯಾ? ಅಥವಾ ಇತರರು ಅದರ ಮೇಲೆ ಹೆಚ್ಚಿನದನ್ನು ಬೋಧಿಸುತ್ತಿರುವುದರಿಂದ ನಾವು ಅದನ್ನು ತುಚ್ಚಿಕರ ಮಾಡುವ ಮನೋಭಾವನೆಯನ್ನು ಹೊಂದಿದ್ದೇವಾ? ಅದನ್ನು ಬೋಧಿಸುವುದರಲ್ಲಿವುದನ್ನು ನಾವು ಅಲಕ್ಷಿಸಿದ್ದೇ ಆದರೆ ಅದನ್ನು ನಾವು ಪ್ರಾಯೋಗಿಕ ಜೀವನದಲ್ಲಿಯೂ ಅಲಕ್ಷಿಸುವವರಾಗಿದ್ದೇವೆಯಾ? ನಾವು ಪ್ರೀತಿಸುವುದರಲ್ಲಿ, ಅನ್ಯೋನ್ಯತೆಯನ್ನು ಪಾಲಿಸುವುದರಲ್ಲಿ, ಮತ್ತು ಇತರರತ್ತ ಕಾಳಜಿವಹಿಸುವದರಲ್ಲಿ ನಾವು ಗುರುತಿಸಲ್ಪಟ್ಟಿದ್ದೇವೆಯಾ? ನಾವು ಹಾಗಿರಬೇಕು.

ಪ್ರೀತಿಯು ನಮ್ಮ ವೈಯಕ್ತಿಕ ಜೀವನದಲ್ಲಿ ಶ್ರೇಷ್ಟವಾದದ್ದಾಗಿದೆಯಾ? ಜನರು ಸತ್ಯಕ್ಕೆ ವೇದದ ಜ್ಞಾನಕ್ಕೆ ಮತ್ತು ಅವಿಶ್ವಾಸಿಗಳ ವಾದವನ್ನು ವಿನಾಶಮಾಡುವಲ್ಲಿ ಸಮರ್ಥವಾಗಿದ್ದಾರೆ; ಆದರೆ ಅದು ಪ್ರೀತಿಯಿಲ್ಲದೇ ಸಮರ್ಪಿತವಾದದ್ದಾಗಿರಬಹುದು. ಕ್ರೈಸ್ತರು ಕಲಿಯುದರಲ್ಲಿ ದೈತ್ಯರೂ, ಸತ್ಯದಲ್ಲಿ ನಿಸ್ಸೀಮರೂ, ನಂಬಿಕೆಯ ಮತ್ತು ಶುದ್ಧತೆಯಲ್ಲಿ ವೀರರೂ ಆಗಿರುತ್ತಾರೆ. ಆದರೆ ಪ್ರೀತಿಯಲ್ಲಿ ದೈತ್ಯರಾದವರ ಅವಶ್ಯಕತೆಯು ನಮಗಿದೆ! ನಾವು ಅವನ್ನು ಹೊಂದಿದ್ದೇವೆಯಾ? ಬಲು ಮುಖ್ಯವಾದದ್ದೆಂದರೆ, ವಸ್ತುವನ್ನು ವ್ಯಕ್ತಿಯಾಗಿ 1 ಕೊರಿಂಥ 13ರಲ್ಲಿ, ಪ್ರೀತಿಯನ್ನು ವರ್ಣಿಸಿದ ರೀತಿಯಲ್ಲಿ ಪ್ರೀತಿಸುವ ಹಾಗೆ ನೀವು ನಿಮ್ಮ ಆದ್ಯತೆಯ ಪಟ್ಟಿಯನ್ನು ತುದಿಯ ಹತ್ತಿರ ಇಟ್ಟಿದ್ದೀರಾ?

ಪ್ರೀತಿಯು ಹೇಗೆ ಆಗಲಿ, ದೇವರಿಂದ ನಿರ್ದೇಷಿಸಲ್ಪಟ್ಟಿರಬೇಕು. ಮೊದಲು ಆಜ್ಞೆಯು ದೇವರನ್ನು ಪ್ರೀತಿಸುವುದೇ ಆಗಿದೆ. ನೀನು ಆತನನ್ನು ಪ್ರೀತಿಸಿದ್ದಾದರೆ, ನೀವು ಆತನ ಆಜ್ಞೆಗಳಿಗೆ ವಿಧೇಯರಾಗಿರುವುದೇ ಆಗಿದೆ.